
UNIVERSITY OF MYSORE

Department of Studies in Sanskrit

# WATER CONCEPT IN SANSKRIT LITERATURE



Scanned with OKEN Scanner

# WATER CONCEPT
# IN
# SANSKRIT LITERATURE

## EDITORIAL COMMITEE :

**Dr. K. Narayana Bhatta**
Associate Professor and Chairman, DOS in Sanskrit, UoM.

**Dr. R. Suresha**
Guest Faculty, DOS in Sanskrit, UoM.

**Dr. Suresh Hegde**
Guest Faculty, DOS in Sanskrit, UoM.

**Dr. Rachoti Devaru**
Guest Faculty, DOS in Sanskrit, UoM.

**One Day National Conference**
**organised by**
**Department of Studies in Sanskrit**
**Manasagangothri, Mysore University**
**Mysuru-06**

Scanned with OKEN Scanner

# WATER CONCEPT
# IN
# SANSKRIT LITERATURE

## EDITORIAL COMMITEE :

**Dr. K. Narayana Bhatta**
Associate Professor and Chairman, DOS in Sanskrit, UoM.

**Dr. R. Suresha**
Guest Faculty, DOS in Sanskrit, UoM.

**Dr. Suresh Hegde**
Guest Faculty, DOS in Sanskrit, UoM.

**Dr. Rachoti Devaru**
Guest Faculty, DOS in Sanskrit, UoM.

Published by :
**Divya R.**
Managing Trustee, Patashala Trust
'A' Cross, Mysuru Road, Bengaluru-26

ISBN No : 978-81-930910-8-1

Pages : 4 + X + 286 = 300
First Edition : 2019
Copy Right : Author
Copies : 100 copies
Price : 300
Printing : Tara Prints, Mysuru

Scanned with OKEN Scanner

| English Articles | | | |
|---|---|---|---|
| 16 | Vishwanatha Bhat | Groundwater Exploration in Brihatsamhita: An Indicator-Based Approach | 98 |
| 17 | Dr Mallikarjun B S | Concept of Water in Upanishads | 106 |
| 18 | Sowmya S N & Srikanth N Jois | Connectedness of Concept of Water in Sanskrit literature and Pranic Healing | 111 |
| 19 | Dr Divya Jyothi | Concept Of Water In Ayurvedic Literature | 118 |
| 20 | Dr V Venkatraman Bhat | Water : The Womb Of Creation | 128 |
| 21 | Mahesh M S | Water: A Medium to Transfer Prana Shakti | 131 |
| 22 | Dr Nagalakshmi S | Importance of Water according to Rig Veda | 141 |
| 23 | Dr R Suresha | Thirst for Water | 147 |
| **Kannada Articles** | | | |
| 24 | Dr Suresh Hegde | ಸಂಸ್ಕೃತ ಸ್ತೋತ್ರಕಾವ್ಯದಲ್ಲಿ ಜಲ ವಿಮರ್ಶೆ | 154 |
| 25 | Dr Shanti Sagar | ಜೈನ-ಸಂಸ್ಕೃತ ವಾಙ್ಮಯದಲ್ಲಿ ನೀರಿನ ಸ್ವರೂಪ ಮತ್ತು ಅದರ ಸಂರಕ್ಷಣೆ | 159 |
| 26 | Vasantha Lakshmi | ವೈದಿಕ ವಾಙ್ಮಯದಲ್ಲಿ ಜಲಚಿಂತನೆ ಮತ್ತು ಪ್ರಸ್ತುತತೆ | 168 |
| 27 | Vidwan Dr Prabhu Swamy | ಸಂಸ್ಕೃತಸಾಹಿತ್ಯದಲ್ಲಿ ಜಲವಿಚಾರಗಳು | 173 |
| 28 | Bheema Naik | ಶಿವತತ್ವರತ್ನಾಕರದಲ್ಲಿನ ಜಲ ವಿಷಯಚಿಂತನೆ | 178 |
| 29 | Dr C Parvathi | ವಿಶ್ವಗುಣಾದರ್ಶಚಂಪೂಕಾವ್ಯದಲ್ಲಿ ಜಲಮೀಮಾಂಸೆ | 183 |
| 30 | Dr Jayarevanna | ಸಂಸ್ಕೃತ ಸಾಹಿತ್ಯ ಕ್ಷೇತ್ರದಲ್ಲಿ ಜಲವಿಮರ್ಶೆ | 189 |




Scanned with OKEN Scanner

# ಶಿವತತ್ವರತ್ನಾಕರದಲ್ಲಿನ ಜಲವಿಷಯ ಚಿಂತನೆ

**ಭೀಮನಾಯ್ಕ ಎಸ್**
ಸಹಾಯಕ ಪ್ರಾಧ್ಯಾಪಕರು, ಅಲಂಕಾರಶಾಸ್ತ್ರ ವಿಭಾಗ
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

**ಪೀಠಿಕೆ:** ನೀರು ಮನುಷ್ಯನ ಜೀವನಕ್ಕೆ ಅವಶ್ಯಕವಾದ ವಸ್ತು. ಇದು ಪಂಚಭೂತಗಳಲ್ಲಿ ಒಂದಾದ ವಸ್ತು. ಜನಸಂಖ್ಯೆ ಹೆಚ್ಚಾದಂತೆ ನೀರಿನ ಅಭಾವ ಜಾಸ್ತಿಯಾಗಿದೆ. ಆದ್ದರಿಂದ ಜೀವ ಸಂರಕ್ಷಣೆ ಪ್ರಾಣಿವರ್ಗಕ್ಕೆ, ಪರಿಸರ ಸಂರಕ್ಷಣೆಗೆ ಕೃಷಿ ಕಾರ್ಯಕ್ಕೆ ಅತ್ಯಂತ ಉಪಯುಕ್ತವಾದ ವಸ್ತು ಈ ಜಲ ವಿಷಯವನ್ನು ಶಿವತತ್ವ ರತ್ನಾಕರ ವಿಶ್ವಕೋಶದಲ್ಲಿ ಕವಿಯು ಪ್ರಸ್ತಾಪಿಸಿದ್ದಾರೆ.

'ಸೂರಿ ನಿಖರಕಲ್ಪದ್ರುಮ ಶ್ರೀಮತ್ಕೆಳದಿ ಬಸವ ಕ್ಷಿತೀಂದ್ರ'ನು ರಚಿಸಿರುವ ಈ ಕೃತಿಯು ಒಂದು "ವಿಶ್ವಕೋಶ" ಈ ಕೃತಿಯು ಬಸವಭೂಪಾಲನ ಸಂಸ್ಕೃತದಲ್ಲಿ ವಿಶ್ವಕೋಶದ ಲಕ್ಷಣಗಳನ್ನು ಹೊಂದಿರುವ ವೇದಗಳ. ರಾಮಾಯಣ, ಮಹಾಭಾರತ, ಪುರಾಣಗಳು, ತಂತ್ರಗಳು, ಸಾಮ್ರಾಜ್ಯಲಕ್ಷ್ಮೀ, ಪೀಠಿಕಾ, ಯುಕ್ತಿಕಲ್ಪತರು, ವೀರಮಿತ್ರೋದಯ, ಮನಸೋಲ್ಲಾಸ, ಶಾರ್ಙ್ಗಧರ್ಪದ್ಧತಿ. ಬೃಹತ್‌ಸಂಹಿತೆ. ಈ ಕೃತಿಗಳು ಪ್ರೇರಣೆಯನ್ನು ನೀಡಿದೆ. ಗಂಗೆಯ ಉದ್ಭವ, ಏಳು ಪರ್ವತಗಳಲ್ಲಿ ಹುಟ್ಟುವ ನದಿಗಳು. ಶಾಕದ್ವೀಪ, ಕುಶದ್ವೀಪ, ಶಾಲ್ಮಲೀ ದ್ವೀಪ, ಪ್ಲಕ್ಷದೀಪಗಳಲ್ಲಿ ಹುಟ್ಟುವ ನದಿಗಳು. ಲಿಂಗ ಶಿಲೆಗೆ ಯೋಗ್ಯವಾದ ನದಿಗಳು ಒಂಭತ್ತು ಜಲಭೇದಗಳು ಕುಡಿಯಲು ಉತ್ತಮವಾದ ಜಲ, ಕುಡಿಯಲು ಯೋಗ್ಯವಲ್ಲದ ಜಲ;. ಪುಷ್ಪವಾಸ ಜಲವನ್ನು ತಯಾರಿಸುವ ಕ್ರಮ. ಎಲ್ಲಾ ವಿಷಯವನ್ನು ಈ ಕೃತಿಯಲ್ಲಿ ತಿಳಿಸಲಾಗಿದೆ.

ಕವಿಯು ಕೃತಿಯನ್ನು ಕ್ರಿ.ಶ. 1709–10 ರಲ್ಲಿ ರಚಿಸಿರುವಂತೆ ಕಂಡುಬರುತ್ತದೆ. ಈ ಕೃತಿಯು ಒಂಭತ್ತು ಕಲ್ಲೋಲಗಳು 108 ತರಂಗಗಳು 13,000 ಸಾವಿರ ಶ್ಲೋಕಗಳನ್ನೊಳಗೊಂಡಿರುವ ಮಹಾಕೃತಿ. ವಿಚಿತ್ರ ನಾನಾ ವಿಷಯಗಳಿಂದ ಕೂಡಿರುವ ಈ ಕೃತಿಯನ್ನು ಕರ್ತೃವು ಸ್ವತಃ ಅನೇಕ ವಿದ್ಯೆಗಳನ್ನು ಅಭ್ಯಾಸ ಮಾಡಿ ಲೋಕದ ಹಿತಕ್ಕಾಗಿ ರಚಿಸಿರುವುದಾಗಿ ಹೇಳಿಕೊಂಡಿದ್ದಾನೆ. ಈ ಕೃತಿಯನ್ನು ರಚಿಸಿ ತನ್ನ ಮಗನಾದ ಎರಡನೇ ಸೋಮಶೇಖರ ನಾಯಕನಿಗೆ ಉಪದೇಶಿರುವಂತೆ ಕಂಡುಬರುತ್ತದೆ. ವಿಶ್ವಕೋಶ ಎಂದರೆ ಲೋಕಜ್ಞಾನದ ಎಲ್ಲಾ ವಿಷಯಗಳನ್ನು ವ್ಯವಸ್ಥಿತವಾಗಿ ನಿರೂಪಿಸುವ ಗ್ರಂಥ ಎಂದು ಹೇಳಲಾಗಿದೆ. ಅಂದರೆ ಪ್ರಪಂಚದಲ್ಲಿನ

ಪ್ರತಿಯೊಂದು ವಿಷಯಗಳ ಕುರಿತು ಪರಿಪೂರ್ಣವಾದ ಜ್ಞಾನವನ್ನು ತಿಳಿಸಿಕೊಡುವ ಕೃತಿಗಳೆಂದು ಹೇಳಬಹುದು. ಕೆಳದಿಯ ಬಸಪ್ಪ ನಾಯಕನಿಂದ ರಚಿತವಾಗಿರುವ 'ಶಿವತತ್ತ್ವರತ್ನಾಕರ'ವು ಅಂತಹ ಕೃತಿಯಾಗಿದೆ. ಈ ಕೃತಿಯಲ್ಲಿ ಕವಿಯು ಸಂಗ್ರಹಿಸಿರುವ ಜಲಕ್ಕೆ ಸಂಬಂಧಿಸಿದ ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

**ಜಲ:** ಜಲ ಎಂದರೆ ನೀರು ಕೆಲವು ಸಂದರ್ಭದಲ್ಲಿ ನೀರಿಗೆ ಅದರದೇಯಾದ ಅರ್ಥ ಬರುತ್ತದೆ. ಮಡಿವಾಳವೆಂಬ ಒಂದು ಸುಗಂಧ ದ್ರವ್ಯ,ಪೂರ್ವಾಷಾಡಾನಕ್ಷತ್ರ ಲಗ್ನದಿಂದ ನಾಲ್ಕನೇಯ ಸ್ಥಾನ. ಹದುವಿನ ಗರ್ಭ. ಈ ರೀತಿಯಾಗಿ ಅರ್ಥಗಳನ್ನು ನೋಡಬಹುದು. ಹಿರಣ್ಯ ಶೃಂಗವೆಂಬ ಪರ್ವತದಲ್ಲಿ ಸುವರ್ಣವನ್ನು ಮರಳಿನಲ್ಲಿ ತೆಗೆಯುತ್ತಿದ್ದರು. ಇಲ್ಲಿ ಬಿಂದು ಸರೋವರವು ಭಗೀರಥನ ಆಶ್ರಮವೆಂದು ಹೆಸರಾಗಿತ್ತು. ಈ ಸ್ಥಳದಲ್ಲಿ ತ್ರಿಪಥಗಾಮಿಯಾದ ಗಂಗೆಯು ಮೊದಲು ಉದ್ಭವವಾಯಿತು ನಂತರ ಮೂರು ಭಾಗಗಳಾಗಿ ಏಳು ಪ್ರವಾಹಗಳಾಗಿ ಸಪ್ತಗಂಗೆಯಾಯಿತು.

ವಸ್ವೌಕಸಾರಾ ನಲಿನೀ ಪಾವನಾ ಚ ಸರಸ್ವತೀ ।
ಜಂಬೂನದೀ ಚ ಶೀತಾ ಚ ಗಂಗಾ ಸಿಂಧುಶ್ಚ ಸಪ್ತಮೀ ॥

ವಸ್ವೋಕಸಾರಾನದಿ, ನಲಿನೀನದಿ, ಪಾವನಳಾದ ಸರಸ್ವತಿ ನದಿ, ಜಂಬೂನದೀ, ಸೀತಾನದೀ, ಗಂಗಾನದಿ,ಸಿಂಧೂನದಿ ಈ ಏಳುನದಿಯಾಗಿ ತ್ರಿಪಥಗಾಮಿಯಾದ ಗಂಗೆಯು ಉದ್ಭವವಾಯಿತು.

**ಕುಡಿಯಲು ಉಪಯುಕ್ತವಾದ ನೀರು ಮತ್ತು ಅವುಗಳ ಭೇದಗಳು:**

ದಿವ್ಯಾಂತರಿಕ್ಷನಾದೇಯಂ ನಿಷ್ಯಂದಂ ಸಾರಸಂ ಜಲಮ್ ।
ಚೌಮಂ ಕೌಂಡಂ ಚ ತಾಟಾಕಂ ನೈರ್ಝರಂ ನವಮಂ ಸ್ಮೃತಮ್॥

ದಿವ್ಯ ಆಂತರಿಕ್ಷ ನಾದೇಯ, ನಿಷ್ಯಂದ, ಸಾರಸ, ಭೌಮ ಕೌಂಡ, ತಟಾಕ ಮತ್ತು ನಿರ್ಝರ ಇವು ನೀರಿನ ಒಂಭತ್ತು ಜಲಭೇದಗಳು

**ಕುಡಿಯಲು ಉತ್ತಮವಾದ ಜಲ:-**

ಅಶೋಕ ಪಲ್ಲವ ಪ್ರಖ್ಯಂ ಶುದ್ಧಸ್ಫಟಿಕ ಸನ್ನಿಭಮ್ ।
ನೀಲೋತ್ಪಲದಲಶ್ಯಾಮಂ ಕಷಾಯಂ ಮಧುರಂ ಪರಮ್ ॥

ಅಶೋಕ ವೃಕ್ಷದ ಚಿಗುರಿನಂತಿರುವ, ಶುದ್ಧ ಸ್ಫಟಿಕದಂತಿರುವ, ನೈದಿಲೆಯ ಬಣ್ಣಗಳಿಂದ ಕೂಡಿರುವ ಕಷಾಯ ಮಧುರ ರಸದಿಂದ ಕೂಡಿದ ನೀರು ಕುಡಿಯುವುದಕ್ಕೆ ಉತ್ತಮವಾದ ಜಲ.

**ಪುಷ್ಪವಾಸ ಜಲವನ್ನು ತಯಾರಿಸುವ ಕ್ರಮ:-** ಸಂಪಿಗೆ ಹೂಗಳನ್ನು ಬೇರೆಸಿ, ಮಾವಿನರಸ, ಪಾದ್ರೆ, ನೈದಿಲೆಗಳನ್ನು ನೀರಿಗೆ ಹಾಕಿ ಸುವಾಸಿತಗೊಳಿಸುವುದಕ್ಕೆ ಪುಷ್ಪವಾಸವೆಂದು ಕರೆಯುತ್ತೇವೆ.

**ಪಿಂಡವಾಸ ನೀರನ್ನು ತಯಾರಿಸುವ ಕ್ರಮ :-** ನಾಗರಮುಸ್ತ, ಏಲಕ್ಕಿ, ಲಾವಂಚ, ಶ್ರೀಗಂಧ, ಇವುಗಳನ್ನು ಅರೆದು, ಮಣ್ಣಿನೊಡನೆ ಸೇರಿಸಿ ಉಂಡೆ

ಮಾಡುವುದು ಕಗ್ಗಿಲೆ ಬೆಂಕಿಯಿಂದ ಸುಟ್ಟ ಈ ಮಣ್ಣಿನ ಉಂಡೆಯನ್ನು ನೀರಿನಲ್ಲಿ ಹಾಕುವುದರಿಂದ ನೀರು ನಿರ್ಮಲವಾಗಿರುತ್ತದೆ. ಈ ನೀರಿಗೆ ಪಿಂಡವಾಸ ಜಲವೆಂದು ಕರೆಯುತ್ತೇವೆ.

**ಚೂರ್ಣಾಧಿವಾಸ ಜಲವನ್ನು ತಯಾರಿಸುವ ಕ್ರಮ:–** ಪಚ್ಚ ಕರ್ಪೂರ, ಕುಂಕುಮ ಕೇಸರಿ, ಲವಂಗ, ಲಾಮಂಚ, ಅಗಿಲುಗಂಧ , ಶ್ರೀಗಂಧ, ಕಲ್ಲೂವು, ನೆಲ್ಲಿಕಾಯಿ, ಬಾಲಮೆಣಸು, ಅಳಲೆಕಾಯಿ, ಕರ್ಪೂರಗಳನ್ನು ಸೇರಿಸಿ ಚೂರ್ಣ ಮಾಡಿ ನೀರಿಗೆ ಸೇರಿಸುವುದು ಆ ನೀರಿಗೆ ಮಾಧುರ್ಯವನ್ನು ಸೇರಿಸುವುದಕ್ಕೆ ಚೂರ್ಣಾಧಿವಾಸ ಜಲವೆಂದು ಕರೆಯುತ್ತೇವೆ.

**ಕುಡಿಯಲು ಯೋಗ್ಯವಲ್ಲದ ಜಲ :–**

ಸಕರ್ಪಮಂ ಸಶೈವಾಲಂ ಪಲ್ವಲೋತ್ಥಂ ಚ ಪಾಲ್ವಲಮ್ ।
ವರ್ಜಯೋ ದೂಷರೋದ್ಭೂತಂ ಗಂಧವರ್ಣಾದಿ ದೂಷಿತಮ್॥

ಕೆಸರಾದ ನೀರು, ಪಾಚಿ ತುಂಬಿದ ನೀರು, ಹಳ್ಳದಿಂದ ಬಂದ ನೀರು, ಚೌಳು ಭೂಮಿಯ ನೀರು ಗಂಧ ವರ್ಣಾದಿಗಳಿಂದ ದೂಷಿತವಾದ ನೀರು ಕುಡಿಯಲು ಯೋಗ್ಯವಲ್ಲದ ಜಲ.

**ಜಲವನ್ನು ಬಳಸುವ ಸಾಧನ ಮತ್ತು ಋತು:–** ಶರದೃತುವಿನಲ್ಲಿ ಬಳಸುವ ನೀರು ಮಣ್ಣಿನ ಮಡಿಕೆಗಳಿಂದ ಕಾಂತಿಯಿಂದ ಕೂಡಿದ ನೀರು. ಬೆಳ್ಳಿ, ಸ್ಪಟಿಕ, ಚಿನ್ನ, ತ್ರಾಮದ ಪಾತ್ರೆಗಳಿಂದ ಮೂರು ಬಾರಿ ಶೋಧಿಸಿ ಸಂಗ್ರಹಿಸಿದ ತಣ್ಣಗಿರುವ ಬಟ್ಟೆಯಿಂದ ಮುಚ್ಚಿ ನಿರ್ಮಲವಾದ ಗಾಳಿ ಬೀಸುವುದು ತಾವರೆ ಎಲೆಯ ದೊನ್ನೆಯಿಂದ ಕುಡಿಯುವುದು ಉತ್ತಮ. ಹೇಮಂತದಲ್ಲಿ ದಿವ್ಯ ಜಲವನ್ನು ಸೇವಿಸುವುದು ಶಿಖರದಲ್ಲಿ ನದಿಯ ಜಲ ವಸಂತ ಋತುವಿನಲ್ಲಿ ತಟಾಕ ಜಲ, ಗ್ರೀಷ್ಮ ಋತುವಿನಲ್ಲಿ ಸರಸ್ಸಿನ ಜಲ, ವರ್ಷ ಋತುವಿನಲ್ಲಿ ನಿರ್ಝರ ಜಲವನ್ನು ಸೇವಿಸುವುದು ಉತ್ತಮ.

**ಪರ್ವತದಲ್ಲಿ ಹುಟ್ಟುವ ನದಿಗಳು:–**

ಮಹೇಂದ್ರೋ ಮಲಯಃ ಶುಕ್ತಿ ಮಾನ್ಯಕ್ಷ ಪರ್ವತ ।
ವಿಂಧ್ಯಶ್ಚ ಪಾರಿಯಾತ್ರಶ್ಚ ಸಪ್ತ್ಯೈತೇ ಕುಲಪರ್ವತಾಃ ।
ಶತದ್ರೂಚಂದ್ರಭಾಗಾದ್ಯಾ ಹಿಮವತ್ಪಾದನಿಸ್ಸೃತಾಃ ॥
ವೇದಸ್ಮೃತಿಮುಖಾಶ್ಚಾದ್ಯಾಃ ಪಾರಿಯಾತ್ರೋದ್ಭವಾ ಮುನೇ ।
ನರ್ಮದಾ ಸುರಸಾದ್ಯಾಶ್ಚ ನದ್ಯೋ ವಿಂಧ್ಯಾದ್ರಿನಿಸ್ಸೃತಾ ಃ ।
ತಾಪೀ ಪಯೋಷ್ಣೀನಿರ್ವಿಂ ಧ್ಯಾ ಪ್ರಮುಖಾ ಋಕ್ಷಸಂಭವಾಃ ।
ಗೋದಾವರೀ ಭೀಮರಥೀ ಕೃಷ್ಣವೇಣ್ಯಾದಿಕಾಸ್ತಥಾ ॥
ಸಹ್ಯಪಾದೋದ್ಭವಾ ನದ್ಯಃ ಸ್ಮೃತಾ ಃ ಪಾಪಭಯಾಪಹಾಃ ।
ಕೃತ ಮಾಲಾ ತಾಮ್ರಪರ್ಣೀ ಪ್ರಮುಖಾ ಮಲಯೋದ್ಭವಾಃ ॥
ತ್ರಿಸಾಮಾ ಋಷಿಕುಲ್ಯಾದ್ಯಾ ಮಹೇಂದ್ರ ಪ್ರಭವಾಃ ಸ್ಮೃತಾಃ ।

ಹಿಮಾಲಯ ಪರ್ವತದಿಂದ – ಶತದ್ರು ಚಂದ್ರಭಾಗಾ

ಪಾರಿಯಾತ್ರ ಪರ್ವತ– ವೇದಸ್ಮೃತಿ
ವಿಂಧ್ಯ ಪರ್ವತದಿಂದ– ನರ್ಮದಾ, ಸುರಸಾ
ಋಕ್ಷ ಪರ್ವತದಿಂದ– ತಾಪೀ, ಪಯೋಷ್ಣಿ, ನಿರ್ವಿಂಧ್ಯಾ
ಸಹ್ಯ ಪರ್ವತದಿಂದ– ಗೋದಾವರಿ, ಭೀಮರಥಿ,ಕೃಷ್ಣವೇಣಿ
ಮಲಯ ಪರ್ವತದಿಂದ– ಕೃತಮಾಲಾ, ತಾಮ್ರಪರ್ಣೀ
ಮಹೇಂದ್ರ ಪರ್ವತದಿಂದ– ತ್ರಿಸಾಮಾ, ಋಷಿಕಲ್ಯಾ

**ಶಾಕದ್ವೀಪದಲ್ಲಿರುವ ಏಳು ನದಿಗಳು:** ಸುಕುಮಾರಿ, ಕುಮಾರಿ, ನಲೀನಿ ವೇಣುಕಾ, ಇಕ್ಷಕಾ, ಧೇನುಕಾ, ಗಭಸ್ತಿ

**ಕುಶದ್ವೀಪದಲ್ಲಿ ಹರಿಯುವ 7 ನದಿಗಳು:**– ಧೂತಪಾಪ, ಶಿವಾ, ಪವಿತ್ರಾ, ಸಮ್ಮತಿ, ವಿದ್ಯುತ್ಪ್ರಭಾ, ರಾಮಾ, ಮಹಾನದಿ

**ಶಾಲ್ಮಲೀ ದ್ವೀಪದ 7 ನದಿಗಳು:** ಗೌರಿ, ಕುಮುದ್ವತಿ, ಸಂಧ್ಯಾ, ರಾತ್ರಿ, ಮನೋಜವಾ, ಖ್ಯಾತಿ, ಪುಂಡರೀಕಾ

**ಪ್ಲಕ್ಷದ್ವೀಪದ 7 ನದಿಗಳು:**– ಅನುತಪ್ತಾ, ಶಿವಾ, ವಿಪಾಪಾ, ತ್ರಿವಿವಾಕೃತಿ, ಅಮೃತಾ ಸುಕೃತಾ.

**ಲಿಂಗ ಶಿಲೆಗೆ ಯೋಗ್ಯವಾದ ನದಿಗಳು:** ಕಾವೇರಿ, ಸರಿಯೂ, ಗಂಗೆ, ಗೋದಾವರಿ, ನರ್ಮದೆ, ಸಿಂಧು, ಶೋಣ, ಸರಸ್ವತಿ, ಯಮುನಾ, ತುಂಗಭದ್ರಾ, ಈ ನದಿಗಳ ತೀರದಲ್ಲಿ ಸಿಗುವ ಶಿಲೆಯಿಂದ ಲಿಂಗಶಿಲೆಗೆ ಯೋಗ್ಯವಾದ ಸ್ಥಳವಾಗಿದೆ.

**ಉಪಸಂಹಾರ:** ಒಟ್ಟಾರೆಯಾಗಿ ಜಲ ವಿಷಯವನ್ನು ಕುರಿತು ಕೆಳದಿಯ ಬಸಪ್ಪನಾಯಕನು ಸಂಸ್ಕೃತ ಭಾಷೆಯಲ್ಲಿ ರಚಿಸಿದ ವಿಶ್ವಕೋಶದಲ್ಲಿ ಜಲವಿಷಯಕ್ಕೆ ಸಂಬಂಧಿಸಿದಂತೆ ಅನೇಕ ವಿಷಯಗಳನ್ನು ಪ್ರಸ್ತಾಪಿಸಿದ್ದಾನೆ. ಮಳೆಗಾಲಕ್ಕೆ ಸಂಬಂಧಿಸಿದಂತೆ ಮೂರನೇ ಕಲ್ಲೋಲದ 2ನೇ ತರಂಗದಲ್ಲಿ ತಿಳಿಸಿದ್ದಾನೆ. ಹಾಗೂ ಜಲ ಉದ್ಭವದ ವಿಷಯ ಗಂಗೆಯ ಏಳುಭಾಗಗಳಾಗಿ ಮೂರು ದಿಕ್ಕಿಗೂ ತ್ರಿಪಥಗಾಮಿಯಾಗಿ ಹರಿಯುವ ವಿಷಯವನ್ನು ಪ್ರಸ್ತಾಪಿಸಲಾಗಿದೆ ಹಾಗೂ ಒಂಭತ್ತು ಜಲ ಭೇದಗಳು, ದಿವ್ಯ, ಆಂತರಿಕ್ಷ, ನಾದೇಯ, ನಿಷ್ಯಂದ, ಸಾರಸ, ಭೌಮ, ಕಾಂಡ, ತಟಾಕ್ ಮತ್ತು ನಿರ್ಝರ ಹೀಗೆ ಒಂಭತ್ತು ಜಲಬೇಧಗಳನ್ನು ತಿಳಿಸಲಾಗಿದೆ. ನೀರು ಕುಡಿಯುವ ಕ್ರಮ, ಕುಡಿಯಲು ಯೋಗ್ಯವಲ್ಲದ ಜಲ, ಪಿಂಡವಾಸ, ಪುಷ್ಪವಾಸ, ಚೂರ್ಣಾಧಿವಾಸ ಜಲವನ್ನು ತಯಾರಿಸುವ ಕ್ರಮ ಋತು ಮತ್ತು ಜಲವನ್ನು ಸ್ವೀಕರಿಸುವ ಸಾಧನ ಏಳು ಪರ್ವತಗಳಲ್ಲಿ ಹುಟ್ಟುವ ನದಿಗಳು ಅವುಗಳ ಪರಿಚಯ ಶಾಕದ್ವೀಪ, ಕುಶದ್ವೀಪ, ಶಾಲ್ಮಲೀದ್ವೀಪ, ಪ್ಲಕ್ಷದೀಪಗಳಲ್ಲಿ ಹುಟ್ಟುವ ನದಿಗಳ ಪರಿಚಯ ಈ ರೀತಿಯಾಗಿ ನೀರಿಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಶಿವತತ್ತ್ವರತ್ನಾಕರ ಮತ್ತು ಇತರ ಕೃತಿಗಳಿಂದ ಸ್ವೀಕರಿಸಿ ಜಲವಿಷಯುವನ್ನು ಪ್ರಸ್ತಾಪಿಸಲಾಗಿದೆ.

**ಪರಮರ್ಶನ ಗ್ರಂಥಗಳು:**


- ಶ್ರೀ ಶಿವತತ್ತ್ವರತ್ನಾಕರ : ಸಂಪುಟ 1 ರಿಂದ 5 ರವರೆಗೆ ಪ್ರೋ ಮಲ್ಲೇಪುರಂ ಜಿ. ವೆಂಕಟೇಶ
- ಸಂಸ್ಕೃತ ಭಾಷಾಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆ ಡಾ: ಕೆ. ಕೃಷ್ಣಮೂರ್ತಿ ಎನ್. ರಂಗನಾಥ ಶರ್ಮ
- ಸಂಸ್ಕೃತ– ಕನ್ನಡ ನಿಘಂಯ ಜಿ. ಎನ್. ಚಕ್ರವರ್ತಿ
- ಸಂಸ್ಕೃತ ಸಾಹಿತ್ಯದ ಇತಿಹಾಸ–: ಆಚಾರ್ಯ ಬಲದೇವ ಪಾದ್ಯ ಅನುವಾದಕ–ಎಸ್.ರಾಮಚಂದ್ರ ಶಾಸ್ತ್ರಿ.




Scanned with OKEN Scanner